## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.538/2020

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | : | ಶಿವಕುಮಾರನಾಯ್ಕ ಚಾಸಾಃ **11** ಪ್ರಾಸಾಃ **4** |
| **ತಂದೆಯ ಹೆಸರು** | : | ವಿಠಲನಾಯ್ಕ |
| **ವಯಸ್ಸು** | : | 54 ವರ್ಷ |
| **ವೃತ್ತಿ** | : | ಗ್ರಾಮ ಪಂಚಾಯಿತಿ ಸದಸ್ಯರು |
| **ವಾಸಸ್ಥಳ** | : | ಘಂಟ್ಯಾಪುರ ಗ್ರಾಮ |

ದಿನಾಂಕಃ **28-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

**1** , **3** ನೇ ಆರೋಪಿತರು ಮತ್ತು ಮೃತ ವಿಷ್ಣು ಗೊತ್ತು. ಚಾಸಾ-**10** ಗೊತ್ತು. **2019** ನೇ ಸಾಲಿನಲ್ಲಿ ಪೊಲೀಸರು ನನ್ನ ಮತ್ತು ಚಾಸಾ-**10** ಮತ್ತು **3** ನೇ ಆರೋಪಿಯ ಸಮಕ್ಷಮ ಅಪಘಾತಕ್ಕೆ ಒಳಗಾದ ಟ್ರ್ಯಾಕ್ಟರ್ ಮತ್ತು ಮೋಟಾರ್ ಸೈಕಲ್ ನ್ನು ಅಮಾನತ್ತು ಪಡಿಸಿಕೊಂಡು, ಅಮಾನತ್ತು ಮಹಜರ್ ಕ್ರಮ ಜರುಗಿಸಿ, ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ.

ಪೊಲೀಸರು ನೀಡಿದ ನೋಟೀಸ್ ನ್ನು ಈಗಾಗಲೇ ನಿಪಿ-**12** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**12(ಬಿ)** ಎಂದು, ಅಮಾನತ್ತು ಮಹಜರ್ ನ್ನು ಈಗಾಗಲೇ ನಿಪಿ-**9** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**9(ಬಿ)** ಎಂದು, ನಿಪಿ-**10** ಮತ್ತು **11** ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-

ದಿಃ **12-12-2019** ರಂದು ಮಧ್ಯಾಹ್ನ **1.00** ರಿಂದ **2.00** ಗಂಟೆ ಸಮಯದಲ್ಲಿ

ಪೊಲೀಸರು ನನ್ನ ಮತ್ತು ಚಾಸಾ-**10** ಮತ್ತು **3** ನೇ ಆರೋಪಿಯ ಸಮಕ್ಷಮ ಟ್ರ್ಯಾಕ್ಟರ್ ಇಂಜಿನ್ ನಂ. ಕೆ ಎ-**17**-ಟಿಡಿ-**4034** ಮತ್ತು ಕೆಎ-**14**-ಡಬ್ಲೂ-**4577** ಮೋಟಾರ್ ಸೈಕಲ್ ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲು :- ಆರೋಪಿ ಪರ ವಕೀಲರಿಂದಃ-

ಚಾಸಾ-**2** ರಿಂದ **7** ಮತ್ತು **10** ಗೊತ್ತು ನಮ್ಮ ಊರಿನವರು ಮತ್ತು ಒಂದೇ ಜನಾಂಗದವರು ಎಂದರೆ ಸರಿ. ನಾನು ಜನಪ್ರತಿನಿಧಿ ಎಂದರೆ ಸರಿ. ನಮ್ಮ ಊರಿನಲ್ಲಿ ಏನಾದರೂ ಗಲಾಟೆಯಾದರೆ ಪೊಲೀಸ್ ಠಾಣೆಯಲ್ಲಿ ಮುಂದಾಳತ್ವವನ್ನು ವಹಿಸಿ ರಾಜಿ ಮಾಡಲು ಮಾತುಕತೆ ಮಾಡುತ್ತೇನೆ ಎಂದರೆ ಸರಿ . ಆದ ಕಾರಣ ನನ್ನನ್ನು ನಮ್ಮ ಊರಿನ ನಾಯಕರನ್ನಾಗಿ ನೇಮಕ ಮಾಡಿದ್ದಾರೆ ಎಂದರೆ ಸರಿ. ನಾನು ನಾಕಯನಾಗಬೇಕೇನುವ ಉದ್ದೇಶಕ್ಕಾಗಿ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಮೃತ ವಿಷ್ಣುವಿನ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಅಮಾನತ್ತು ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಮತ್ತು ಪೊಲೀಸರ ಒತ್ತಡಕ್ಕೆ ಮಣಿದ್ದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಗೊತ್ತಿಲ್ಲದೇ ಇದ್ದರೂ ಸಹ ಗೊತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.